ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿಪಂಚಾಯತ್ ರಾಜ್ ಮಂತ್ರಿಗಳು).—

ಅ) ೧೧೨.೧೭೦ ಲಕ್ಷ ರೂಗಳು,

ಆ) ಖರ್ಚಾದ ಹಣ : ೯.೦೦೨ (ಲಕ್ಷ ರೂಗಳಲ್ಲಿ) ಕೈಗೊಂಡ ಹೊಸ ಕೆಲಸಗಳು

ಕೆಲಸದ ವರ್ಗ		ಕೆಲಸಗಳ ಸಂಖ್ಯೆ
೧. ಶಾಲಾ ಕೊಠಡಿಗಳು	...	೧೪
೨. ಕುಡಿಯುವ ನೀರಿನ ಭಾವಿಗಳು	...	೨
೩. ಗುಂಪು ಮನೆಗಳು	...	೨೦
೪. ರಸ್ತೆಗಳು	...	೮
೫. ಗ್ರಾಮೀಣ ಬ್ಯಾಂಕ್ ಕಟ್ಟಡಗಳು	...	೪
೬. ಲೈಬ್ರರಿ ಕಟ್ಟಡಗಳು	...	೨
ಒಟ್ಟು	...	೫೦

ಹಳ್ಳಿಗಾಡಿನಲ್ಲಿರುವ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲೀಷ್ ಭಾಷೆ ಮತ್ತು ಗಣಿತ ಜ್ಞಾನದ ಬಗ್ಗೆ

೧೭೬೫. ಶ್ರೀ ಬಿ. ಧರ್ಮಪ್ಪ (ಸಾಗರ).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಳ್ಳಿಗಳಲ್ಲಿನ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ೫ನೇ ತರಗತಿಯಿಂದ ಇಂಗ್ಲೀಷನ್ನು ೨ನೇ ಭಾಷೆಯಾಗಿ ಬೋಧಿಸುತ್ತಿರುವುದರಿಂದ ಇಂಗ್ಲೀಷ್ ಮತ್ತು ಲೆಕ್ಕದ ವಿಷಯಗಳಲ್ಲಿ ಹಳ್ಳಿಗಾಡಿನ ಕಡೆಯಿಂದ ಬಂದ ವಿದ್ಯಾರ್ಥಿಗಳ ಜ್ಞಾನ ಮಟ್ಟ ಕಡಿಮೆಯಾಗಿದ್ದುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ರೀತಿ ಅವರಿಗೆ ಈ ೨ ವಿಷಯಗಳಲ್ಲಿ ಜ್ಞಾನ ಮಟ್ಟ ಕಡಿಮೆಯಾಗಿರುವುದಕ್ಕೆ ಈ ವಿಷಯಗಳಲ್ಲಿ ಸರಿಯಾದ ತರಬೇತಿ ಪಡೆಯದ ಉಪಾಧ್ಯಾಯರು ಮತ್ತು ಪ್ರಬಂಧನ ಕ್ರಮದಲ್ಲಿ ಲೋಪ ವಿರುವುದು ಕಾರಣವಲ್ಲವೇ?

ಇ) ಆಂಗ್ಲ ಭಾಷೆ ಬೇಕೇ ಬೇಕು ಎಂದಾದಲ್ಲಿ ೫ ರಿಂದ ೭ನೇ ತರಗತಿಯವರೆಗೆ ಆಂಗ್ಲ ಪಂಡಿತ್ತು ಲೆಕ್ಕ ವಿಷಯಗಳನ್ನು ಹೇಳಿ ಕೊಡುವಂತಹ ಅಧ್ಯಾಪಕರುಗಳ ತರಬೇತಿ ಮಾಡಿ ಪ್ರತಿ ಶಾಲೆಯಲ್ಲಿಯೂ ಅಂತಹ ಅಧ್ಯಾಪಕರಂಗಳ ನೇಮಕ ಮಾಡಲು ಇರುವ ತೊಂದರೆಗಳೇನು ಹಾಗೂ ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—

ಅ) ಹೌದು ಕೆಲವು ಮಕ್ಕಳಲ್ಲಿ ಮಾತ್ರ

ಆ) ತರಬೇತಿ ಪಡೆದ ಶಿಕ್ಷಕರಿದ್ದರೂ, ಅನಕ್ಷರಸ್ಥ ಕುಟುಂಬದ ಮಕ್ಕಳ ಪರಿಸರ ವಿದ್ಯಾವಂತ ಜನರ ಕುಟುಂಬದ ಪರಿಸರದಿಂದ ಭಿನ್ನವಾಗಿರುತ್ತೆ.

ಇ) ಸಾಮಾನ್ಯವಾಗಿ ಪ್ರಾಥಮಿಕ ಶಾಲಾ ಉಪಾಧ್ಯಾಯರಾಗಿ ನೇಮಕಗೊಳ್ಳುವವರು ತರಬೇತಿಯನ್ನು ಪಡೆದೇ ಇರುತ್ತಾರೆ. ವಿಜ್ಞಾನ ಹಾಗೂ ಆಂಗ್ಲ ಭಾಷೆಗಳಲ್ಲಿ ವಿಶೇಷ ತರಬೇತಿ ಅವಶ್ಯಕ, ಇದಕ್ಕೆ ವ್ಯವಸ್ಥೆ ಮಾಡಲಾಗಿದೆ.